ದಿನಾಂಕ 18-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ</u>**

1) ಚಾಸಾ-1 ದಿನಾಂಕ 16-03-2019 ರಂದು ಬೆಳಿಗ್ಗೆ 8.00 ಗಂಟೆಯ ಸಮಯದಲ್ಲಿ ನನ್ನ ಕಚೇರಿಯಲ್ಲಿ ಭೇಟಿಯಾಗಿದ್ದರು. ಆಗ ಅವರೊಂದಿಗೆ ಮೊಬೈಲ್ ತಂದಿದ್ದರು ಎಂದರೆ, ಮೊಬೈಲ್ ಮತ್ತು ಸಿಡಿ ತಂದಿದ್ದರು. ಮೊಬೈಲ್ ನಲ್ಲಿ ಇದ್ದ ಸಂಭಾಷಣೆಯನ್ನು ಕೇಳಿಸಿದ್ದರು. ಚಾಸಾ-1 ಕೊಟ್ಟ ಸಿಡಿಯನ್ನು ಆದಿನವೇ ನಾನು ಕೇಳಿದ್ದೆ. ಮೊಬೈಲ್ ನಲ್ಲಿಯ ಸಂಭಾಷಣೆಯನ್ನು ನಾನು ಪ್ರತ್ಯೇಕವಾಗಿ ಸಿ.ಡಿಗೆ ವರ್ಗಾಯಿಸಿಲ್ಲ. ಪಿರ್ಯಾಧಿಯ ಮೊಬೈಲ್ ನ್ನು ನಾನು ಜಪ್ತು ಮಾಡಿಲ್ಲ. ಅದರ ಅವಶ್ಯಕತೆ ಕಂಡುಬರಲಿಲ್ಲ.

2) ಆದಿನ ಚಾಸಾ-1, ಮಧ್ಯಾಹ್ನ 12 ಗಂಟೆಯವರೆಗೆ ನಮ್ಮ ಕಚೇರಿಯಲ್ಲಿದ್ದರು. ಚಾಸಾ-1 ದೂರನ್ನು ಬರೆದುಕೊಂಡು ಬಂದಿದ್ದರು. ನಮ್ಮ ಕಚೇರಿಯಿಂದ ಆರೋಪಿಯ ಕಚೇರಿ ಸುಮಾರು 6 ಕಿ.ಮೀಗಳ ಅಂತರ. ಚಾಸಾ-4 ಮತ್ತು 5 ಇವರಿಗಾಗಿ ನಮ್ಮ ಸಿಬ್ಬಂದಿಯ ಮೂಲಕ ಬೆಳಗ್ಗಿನ 8.30 ಗಂಟೆಗೆ ನೋಟಿಸು ಕಳುಹಿಸಿದ್ದೆ. ಚಾಸಾ-4 ಮತ್ತು 5 ಜೊತೆಯಲ್ಲಿಯೇ ಬಂದಿದ್ದರು. ಚಾಸಾ-4 ಮತ್ತು 5 ಇವರಿಗೆ ದೂರುದಾರ ಹಾಜರುಪಡಿಸಿದ ಸಂಭಾಷಣೆಯನ್ನು ಕೇಳಿಸಿದಾಗ ಅವರು ಸಹ ಅಲ್ಲಿಯೇ ಇದ್ದರು. ದೂರುದಾರರಿಗೆ ನಾನು ಕೊಟ್ಟಿದ್ದ ವಾಯ್ಸು ರೆಕಾರ್ಡರ್ ನಲ್ಲಿ ಈ ಮೊದಲೇ ಯಾವುದೇ ಸಂಭಾಷಣೆ ಇರುವುದಿಲ್ಲ ಎಂದು ಖಾತ್ರಿ ಪಡಿಸಿಕೊಂಡಿದ್ದೆ. ಈ ಬಗ್ಗೆ ಮಹಜರಿನಲ್ಲಿ ನಮೂದಿಸಿದ ಬಗ್ಗೆ ಗಮನಿಸಿಲ್ಲ. ಸಾಮಾನ್ಯವಾಗಿ ನಮ್ಮ ಎಲ್ಲಾ ಟ್ರ್ಯಾಪ್ ಗಳಲ್ಲಿ ಇದೇ ವಾಯ್ಸು ರೆಕಾರ್ಡರ್ ನ್ನು ಬಳಸುತ್ತೇವೆ ಎಂದರೆ ನಿಜ.

3) ಆದಿನ ನಮ್ಮ ಕಚೇರಿಯಿಂದ ಆರೋಪಿಯ ಕಚೇರಿಗೆ ಕಲ್ಸಂಕ-ಮಣಿಪಾಲ ಮುಖಾಂತರ ಹೋಗಿದ್ದೇವೆ. ನಾವು ಮಣಿಪಾಲ ಮುಟ್ಟಿದಾಗ 12-15 ರಿಂದ 12-30 ರ ಅವಧಿಯಾಗಿತ್ತು. ಆದಿನ ನನ್ನೊಂದಿಗೆ ಚಾಸಾ-15,

16, 18, ಇನ್ಸಪೆಕ್ಟರ್ ಸತೀಶ್ , ರಾಘವೇಂದ್ರ ಚಾಲಕ ಇದ್ದರು. ಆದಿನ ನಾವು ಎರಡು ಇಲಾಖಾ ವಾಹನ ಮತ್ತು ಒಂದು ಖಾಸಗಿ ವಾಹನದಲ್ಲಿ ಹೋಗಿದ್ದೆವು. ದೂರುದಾರ ತನ್ನ ವಾಹನವನ್ನು ಎಲ್ಲಿ ನಿಲ್ಲಿಸಿದ್ದರು ಎಂದು ನೆನಪಿಲ್ಲ. ಚಾಸಾ-1 ಇವರಿಗೆ ವಾಯ್ಸ ರೆಕಾರ್ಡರ್ ನ್ನು ನಮ್ಮ ಕಚೇರಿಯಲ್ಲಿ ಅಲ್ಲಿಂದ ಬಿಡುವ ಮುನ್ನ ಸುಮಾರು 11 ಗಂಟೆಯ ಸಮಯದಲ್ಲಿ ಕೊಟ್ಟಿದ್ದೆ. ಅದನ್ನು ಆರೋಪಿಯ ಕಚೇರಿಗೆ ಹೋಗುವ ಮೊದಲು ಅದನ್ನು ಬಳಸುವುವ ಬಗ್ಗೆ ತಿಳಿಸಿ ಹೇಳಿದ್ದೆ. ಟ್ರ್ಯಾಪ್ ಸಮಯದ ನಂತರ ಅದನ್ನು ನಮ್ಮ ಸಿಬ್ಬಂದಿ ಆಪ್ ಮಾಡಿದ್ದರು. ಅದನ್ನು ನಮ್ಮ ಯಾವ ಸಿಬ್ಬಂದಿ ಎಷ್ಟು ಗಂಟೆಯ ಸಮಯದಲ್ಲಿ ಆಪ್ ಮಾಡಿದ್ದರು ಎಂದು ಗೊತ್ತಿಲ್ಲ.

4) ಆದಿನ ನಾನು ಆರ್ ಟಿ ಓ ಕಚೇರಿಯ ಕಂಪೌಂಡ್ ಒಳಗೆ ಹೋಗುವಾಗ 2 ರಿಂದ 2-30 ಗಂಟೆ ಆಗಿರಬಹುದು. ಆದಿನ ಪಿರ್ಯಾಧಿ ಆರೋಪಿಯ ಕೋಣೆಗೆ 2 ಬಾರಿ ಹೋಗಿದ್ದನು ಎಂದು ತಿಳಿದಿತ್ತು. ಚಾಸಾ-1, ಆರೋಪಿಯ ಕಚೇರಿಯ ಒಳಗೆ 2 ನೇ ಬಾರಿ ಹೋದಾಗ ಹಣ ಕೊಟ್ಟಿದ್ದನು ಎಂದು ತಿಳಿದಿತ್ತು. ನಾನು ಆರೋಪಿಯ ಕೋಣೆಗೆ ಮೊದಲ ಬಾರಿ ಹೋದಾಗ ಸಮಯ ಸುಮಾರು 2-15 ರಿಂದ 2-30 ಅಗಿತ್ತು. ಆರೋಪಿಯ ಕಚೇರಿ ಮತ್ತು ಕೋಣೆಯಲ್ಲಿ ಸಿಸಿ ಟಿವಿ ಇದ್ದ ಬಗ್ಗೆ ನನಗೆ ಮೊದಲು ಗೊತ್ತಿರಲಿಲ್ಲ. ಆರೋಪಿಯ ಕೈಯನ್ನು ಈ ಕೇಸಿನಲ್ಲಿ ನಾನು ಒಂದು ಬಾರಿ ತೊಳೆಸಿದ್ದೇನೆ. ಆದಿನ ನಾನು ಆರೋಪಿಯ ಕೈಯನ್ನು ತೊಳೆಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿಲ್ಲ ಎಂದರೆ ಸರಿಯಲ್ಲ. ಸಿ.ಸಿ ಟಿವಿ ಇದ್ದ ಬಗ್ಗೆ ನನಗೆ ಆರೋಪಿಯ ಕೋಣೆಗೆ ಹೋದ ನಂತರ ನನಗೆ ತಿಳಿದಿತ್ತು. ಚಾಸಾ-6 ಇವರನ್ನು 1 ನೇ ಅರೋಪಿಯ ಕೋಣೆಗೆ ಕರೆಸಿದಾಗ ಸಮಯ ಸುಮಾರು 4 ಗಂಟೆ. ಆದಿನ ಡಿವಿಆರ್ ನಲ್ಲಿಯ ದ್ರಶ್ಯಾವಳಿಯನ್ನು ಸಿಡಿ ಮತ್ತು ಪೆನ್ ಡ್ರೈವ್‌ಗೆ ಹಾಕಿಕೊಟ್ಟಿದ್ದು ಚಾಸಾ -6 ಇವರು. ಯಾವ ದ್ರಶ್ಯಾವಳಿಗಳನ್ನು ಸಿಡಿ ಮತ್ತು ಪೆನ್ ಡ್ರೈವ್‌ಗೆ ಹಾಕಿಕೊಡಬೇಕೆಂದು ತೋರಿಸಿದ್ದು ನಾನೇ. ನಾನು ಡಿ.ವಿ.ಆರ್ ನ್ನು ನೋಡಿದಾಗ ಆರೋಪಿಯ ಕೋಣೆಗೆ ಚಾಸಾ-1, ಆದಿನ ಒಟ್ಟು 3 ಬಾರಿ ಹೋಗಿ ಬಂದಿದ್ದಾರೆ ಎಂದರೆ, ಇರಬಹುದು.

5) ನಾವು ಟ್ರ್ಯಾಪ್ ಮಾಡುವ ಮೊದಲು ಚಾಸಾ-1 ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಅದೇ ದಿನ ಪಡೆದುಕೊಂಡಿದ್ದರು ಎಂದರೆ ನಿಜ. ನಾನು ಆರೋಪಿತರನ್ನು ಟ್ರ್ಯಾಪ್ ಮಾಡಿದ ಸಮಯದಲ್ಲಿ ಆರೋಪಿಯಿಂದ ಪಿರ್ಯಾಧಿಯ ಕೆಲಸ ಬಾಕಿ ಇರಲಿಲ್ಲ ಎಂದರೆ ನಿಜ. ಆದಿನ ಟ್ರ್ಯಾಪ್ ಮಾಡುವ ಪೂರ್ವದಲ್ಲಿ ಪಿರ್ಯಾಧಿ ತನಗೆ ದಾಖಲೆಗಳು ಸಿಕ್ಕ ಬಗ್ಗೆ ನನಗೆ ಹೇಳಿಲ್ಲ.

6) ಆದಿನ ಪಿರ್ಯಾಧಿ ಆರೋಪಿಯ ಕಚೇರಿಗೆ ಹೋದ ನಂತರ, ಟ್ರ್ಯಾಪ್ ಮುಗಿಯುವರೆಗೆ ನನ್ನ ಮತ್ತು ಅವರ ನಡುವೆ ಯಾವುದೇ ಸಂಭಾಷಣೆ ಇರಲಿಲ್ಲ. ಆದಿನ ನಾನು ಅರೋಪಿಯ ಚೇಂಬರ್ ಗೆ ಹೋದ ನಂತರ ಹೊರಗೆ ಬಂದದ್ದು ಸಂಜೆ 8.35 ರ ನಂತರ. ಈ ಮಧ್ಯೆ ತನಿಖೆಗಾಗಿ ಹೋಗಿ ಬಂದು ಮಾಡುತ್ತಿದ್ದೆ. ಪಂಚನಾಮೆಯನ್ನು ಬರೆಯಲು ಹೇಳಿದ್ದು ನಾನೇ. ಪಿರ್ಯಾಧಿ ಕೊಟ್ಟ ಸನ್ನೆಯ ನಂತರ ನಾನು ಆತನ ಬಳಿ ಹೋಗಿ ವಿಚಾರಣೆ ಮಾಡಿದ್ದೆ. ಅದು ವಾಯ್ಸ್ ರೆಕಾರ್ಡರ್ ನಲ್ಲಿ ರೆಕಾರ್ಡ ಆಗಿದೆ. ಪಿರ್ಯಾಧಿ ಆಗ ನಾನು ಕೇಳಿದಾಗ ಆತನಿಗೆ ದಾಖಲೆಗಳು ಸಿಕ್ಕಿರುವುದಾಗಿ, ಅವರು ಹಣ ಬೇಡಾ ಎಂದು ಹೇಳಿದ್ದರು, ನಾನು ಹಣವನ್ನು ಟೇಬಲ್ ಮೇಲೆ ಇಟ್ಟಿರುವುದಾಗಿ ಚಾ ಸಾ-1 ಹೇಳಿದ್ದಾರೆ ಎಂದರೆ, ಆರೋಪಿ ಹಣ ಇಡಲು ಹೇಳಿದಂತೆ ಚಾಸಾ-1 ಇಟ್ಟಿದ್ದೇನೆ ಎಂದು ಹೇಳಿದ್ದ.

7) ನಾನು ಹೋದ 15 ನಿಮಿಷಗಳಲ್ಲಿ 2 ನೇ ಅರೋಪಿ, 1 ನೇ ಆರೋಪಿಯ ಕೋಣೆಗೆ ಬಂದಿದ್ದ. 1 ನೇ ಅರೋಪಿಯೇ 2 ನೇ ಆರೋಪಿಯನ್ನು ಕೋಣೆಗೆ ಕರೆಸಿದ್ದರು. ಆತನನ್ನು ಅವರ ಸಿಬ್ಬಂದಿಯ ಮೂಲಕ ಕರೆಸಿದ್ದರು. ಆ ಸಿಬ್ಬಂದಿಯನ್ನು ನಾವು ತನಿಖೆಯಲ್ಲಿ ವಿಚಾರಿಸಿಲ್ಲ. ನಾವು 1 ನೇ ಅರೋಪಿತನ ಕೋಣೆಗೆ ಹೋದ 10 -15 ನಿಮಿಷಗಳ ನಂತರ ಆತನ ಕೈಗಳನ್ನು ತೊಳೆಸಿತ್ತು. 2 ನೇ ಆರೋಪಿಯ ಕೈಗಳನ್ನು ಆತ ಬಂದ ಸುಮಾರು 20 ನಿಮಿಷಗಳ ನಂತರ ತೊಳೆಸಿತ್ತು. 2 ನೇ ಅರೋಪಿತನ ಕೈಯನ್ನು ತೊಳೆಯುವ ಮೊದಲು ಆತನನ್ನು 1 ನೇ ಅರೋಪಿಯ ಕೋಣೆಯಿಂದ ಹೊರಗೆ ಕರೆದುಕೊಂಡು ಹೋಗಿತ್ತು. 2 ನೇ ಅರೋಪಿ ಕೋಣೆಯ ಒಳಗೆ ಬಂದ ಕೂಡದೇ ಆತನ ಕೈಗಳನ್ನು ತೊಳೆಸಲು ತೊಂದರೆ ಇತ್ತಾ ಎಂದರೆ, ಆ ಹಣ ರಿಕವರಿ ಆಗಬೇಕು ಎಂಬ ಕಾರಣದಿಂದ, ಅದನ್ನು

ಪಡೆದ ನಂತರ ಕೈ ತೊಳೆಸಿತ್ತು. 1 ನೇ ಅರೋಪಿಗೆ ನೀಡಿದ್ದ ಹಣವನ್ನು 2 ನೇ ಅರೋಪಿ ಕೈಯಲ್ಲಿ ತಗೆದುಕೊಂಡು ಹೋಗಿದ್ದನು ಎಂಬ ಬಗ್ಗೆ ನನಗೆ ಮೊದಲು ತಿಳಿದಿತ್ತು. ಆದಿನ 2 ನೇ ಆರೋಪಿಯನ್ನು 1 ನೇ ಆರೋಪಿತನ ಕೋಣೆಯಿಂದ ಹೊರಗೆ ಕರೆದುಕೊಂಡು ಹೋಗಿ, ಆತನ ಕೈಗಳಿಗೆ ಫಿನಾಪ್ತಲೀನ್ ಪುಡಿಯನ್ನು ಸವರಿ, ನಂತರ ಕರೆತಂದು, 2 ನೇ ಅರೋಪಿಯ ಕೈ ತೊಳೆಸಲಾಗಿತ್ತು ಎಂದರೆ ಸರಿಯಲ್ಲ.

8) ಚಾಸಾ-1, ತನ್ನ ಮೊಬೈಲ್ ನಲ್ಲಿದ್ದ ಸಂಭಾಷಣೆಯನ್ನು ಸಿಡಿಗೆ ಎಲ್ಲಿ, ಹೇಗೆ ಮಾಡಿದ್ದನು ಎಂದು ನಾನು ವಿಚಾರಿಸಿಲ್ಲ. ಚಾಸಾ-1 ಕೊಟ್ಟಿದ್ದ ಸಿಡಿಯ ಮುದ್ರಣದ ಸಂಭಾಷಣೆಗಾಗಿ ಆತನಿಂದ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ)ನೇದರ ಪ್ರಮಾಣ ಪತ್ರವನ್ನು ಪಡೆದಿಲ್ಲ. ಚಾ.ಸಾ-1 ಕೊಟ್ಟಿದ್ದ ಸಂಭಾಷಣೆ ಇದ್ದ ಸಿಡಿಯನ್ನು ಎಫ್ .ಎಸ್.ಎಲ್. ತಪಾಸಣೆಗೆ ಕಳುಹಿಸಿಲ್ಲ. ಪಿರ್ಯಾಧಿಯ ಮಾದರಿ ಧ್ವನಿಗಳನ್ನು ನಾನು ತಪಾಸಣೆಗಾಗಿ ಪಡೆದಿಲ್ಲ. ನನಗೆ ಈ ಪ್ರಕರಣದಲ್ಲಿ ಸತೀಶ್ ಎಂಬ ಇನ್ಸಪಕ್ಟರ್ ತನಿಖೆಯಲ್ಲಿ ಸಹಕರಿಸಿದ್ದಾರೆ.

9) ಆದಿನ 2 ನೇ ಆರೋಪಿ ನಮಗೆ ಇಟ್ಟ ಹಣವನ್ನು ತೋರಿಸಲು ನಾವು ಇದ್ದ ಮಹಡಿಯಿಂದ ಕೆಳ ಮಹಡಿಗೆ ಕರೆದುಕೊಂಡು ಹೋಗಿದ್ದ. ಆಗ ನಾನು, ಇನ್ಸಪೆಕ್ಟರ್ ಸತೀಶ್ ಮತ್ತು ಬೇರೆ ಸಿಬ್ಬಂದಿಗಳು ಸಹ ಇದ್ದರು. ಆದಿನ ನಾವು ಆರೋಪಿತನ್ನು ಕರೆದುಕೊಂಡು ಬರುವಾಗ ಅವನ ಸ್ಕೂಟರ್ ನಲ್ಲಿದ್ದ ನೀಲಿ ಬಣ್ಣದ ಕವರ್ ನ್ನು ತಂದಿದ್ದೇವೆ. ಆದಿನ ಪಿರ್ಯಾಧಿಯ ಬಳಿಯಲ್ಲಿದ್ದ ವಾಯ್ಸು ರೆಕಾರ್ಡರ್ ನಲ್ಲಿದ್ದ ಎಲ್ಲಾ ಸಂಭಾಷಣೆಯನ್ನು ಲಿಪಿಕರಿಸಿದೆ. ನಿಶಾನೆ ಪಿ-4 ರಲ್ಲಿ ''ಮುನ್ನ ಕಡೆಯಿಂದ ತೆಗೆದುಕೊಂಡು ಹೋಗು ಎಂಬುದನ್ನು, ಮುನ್ನ ಕೈ ಕೊಟ್ಟು ಹೋಗು'' ಎಂದು ಬರೆದಿದೆ ಎಂದರೆ ಸರಿಯಲ್ಲ. (** ಸಿಡಿ**) . ತದನಂತರದಲ್ಲಿ ನಾನು ಒಳಗೆ ಹೋದಾಗ ''ಮುನಾಫ್ ಹತ್ತಿರ ತಗೊಳ್ಳಿ ಎಂದು ಹೇಳಿದ್ದಾನೇ " ಎಂದರೆ ಸರಿ.

10) ನ್ಯಾಯಾಲಯಕ್ಕೆ ವಾಯ್ಸು ರೆಕಾರ್ಡರ್ ನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ. ವಾಯ್ಸು ರೆಕಾರ್ಡರ್ ನಲ್ಲಿಯ ಸಂಭಾಷಣೆಯನ್ನು

ಯಥಾವತ್ತಾಗಿ ನಾನು ಸಿಡಿಗೆ ಹಾಕಿಲ್ಲ ಎಂದರೆ ಸರಿಯಲ್ಲ. ಅದನ್ನು ನನಗೆ ಬೇಕಾದಂತೆ ತಿರುಚಿ ಹಾಕಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರಿಂದ ಯಾವುದೇ ಧ್ವನಿಗಳ ಮಾದರಿಗಳನ್ನು ನಾವು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನಗೆ ಯಾವುದೇ ಸಂಭಾಷಣೆ ಇರುವ ಸಿಡಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಅದನ್ನು ಚಾಸಾ-1 ಈತನೊಂದಿಗೆ ಸೇರಿ, ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-6 ಈತನಿಂದ ಸಿಡಿ ಮತ್ತು ಪೆನ್ ಡ್ರೈವ್ ಗಳಿಗೆ ದ್ರಶ್ಯಾವಳಿಗಳನ್ನು ಹಾಕಿಸಿಕೊಳ್ಳುವ ಮೊದಲು ಆ ಸಿಡಿ ಮತ್ತು ಪೆನ್ ಡ್ರೈವ್ ಗಳು ಖಾಲಿ ಇರುವ ಬಗ್ಗೆ ಮಹಜರಿನಲ್ಲಿ ನಮೂದಿಸಿಕೊಂಡಿಲ್ಲ. 1 ಮತ್ತು 2 ನೇ ಅರೋಪಿತರಿಂದ ಧ್ವನಿಯ ಮಾದರಿಗಳನ್ನು ಪಡೆದುಕೊಂಡಿದ್ದ ಬಗ್ಗೆ ನಿಶಾನೆ ಪಿ-13, 17, ಮತ್ತು ಎಂಒ-15 ಮತ್ತು 16 ಇವುಗಳನ್ನು ಸೃಷ್ಟಿಸಿದೆ ಎಂದರೆ ಸರಿಯಲ್ಲ. ಚಾ ಸಾ-1 ಈತನನ್ನು ಬಳಸಿಕೊಂಡು, ಆರೋಪಿತರ ಮೇಲೆ ಒಂದು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ -1, 1 ನೇ ಅರೋಪಿಯ ಕೋಣೆಗೆ 3 ಬಾರಿ ಹೋಗಿದ್ದರೂ ಕೂಡಾ, ಆ ದ್ರಶಾವಳಿಗಳನ್ನು ನ್ಯಾಯಾಲಯದ ಮುಂದೆ ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯ ಸಮಯದಲ್ಲಿ 1 ನೇ ಆರೋಪಿಯಿಂದ ದೂರುದಾರನಿಗೆ ಯಾವುದೇ ಕೆಲಸ ಬಾಕಿ ಇರುವುದಿಲ್ಲ ಮತ್ತು ಆತನಿಂದ ಯಾವುದೇ ಹಣದ ಬೇಡಿಕೆ ಇರಲಿಲ್ಲ ಎಂದು ಕಂಡುಬಂದಿದ್ದರೂ, ಆರೋಪಿತನ ಮೇಲೆ ಒಂದು ಸುಳ್ಳು ದೋಷರೋಪಣಾ ಮತ್ತು ಒಂದು ತಪ್ಪು ವರ್ತಮಾನವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

12) ಅದೇ ದಿನ ಆರೋಪಿತರು ಈ ಪ್ರಕರಣಕ್ಕೂ, ಹಣಕ್ಕೂ ಅವರಿಗೆ ಯಾವುದೇ ಸಂಬಂಧ ಇಲ್ಲ ಎಂದು ಅದೇ ದಿನ ಸಮಜಾಯಿಷಿ ನೀಡಿದ್ದರು ಎಂದರೆ ನಿಜ. 2 ನೇ ಆರೋಪಿ ಆದಿನ ತಾನು ಕೋಳಿಯ ವ್ಯಾಪಾರ ಮಾಡುತ್ತಿದ್ದು, ಆ ವ್ಯಾಪಾರದಿಂದ ಬಂದ ಹಣ ಸ್ಕೂಟರ್ ನಲ್ಲಿ ಇರುವುದಾಗಿ ನನ್ನ ಮುಂದೆ ಸಮಜಾಯಿಷಿ ನೀಡಿದ್ದರು ಎಂದರೆ ನಿಜ. ಆದಿನ ನಾನು ಮತ್ತು ಇನ್ಸಪೆಕ್ಟರ್ ಸತೀಶ್ ಕುಮಾರ್ 2 ನೇ ಅರೋಪಿತನೊಂದಿಗೆ ಹೋಗಿ, ಆ ಹಣವನ್ನು ಗ್ರೌಂಡ್

ಪ್ಲೋರ್ ನ ಪಾರ್ಕಿಂಗ್ ನಲ್ಲಿದ್ದ ಸ್ಕೂಟರ್ ನಿಂದ ತಂದಿದ್ದೇವೆ ಎಂದರೆ ಸರಿಯಲ್ಲ. ಆದಿನ ಸ್ಕೂಟರ್ ನಿಂದ ಬ್ಯಾಗ್ ನ್ನು ತಂದಿದ್ದೇವೆ, ಬ್ಯಾಗ್ ನಲ್ಲಿ ಹಣ ಇರಲಿಲ್ಲ. ನ್ಯಾಯಾಲಯದಲ್ಲಿ ಮುಂದೆ ಇರುವ ಮುದ್ದೆಮಾಲುಗಳಿಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಉಭಯ ಅರೋಪಿತರಿಂದ ಯಾವುದೇ ಹಣವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಜಪ್ತಾದ ಡಿ.ವಿ.ಆರ್. ತೋರಿಸಿ ಪ್ರಶ್ನೆ ಕೇಳಬೇಕಾಗಿದ್ದರಿಂದ , ಅದರ ಚಾಲನೆಗೆ ಚಾಸಾ-6 ಈತನ ಹಾಜರಾತಿ ಅವಶ್ಯಕತೆ ಇರುವುದರಿಂದ ಈ ಹಂತದಲ್ಲಿ ಪಾಟೀಸವಾಲನ್ನು ಭಾಗಶಃ ಮುಂದೂಡಲಾಗಿದೆ)

**ಪಾಟಿಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದ**

13) ಆದಿನ 2 ನೇ ಅರೋಪಿಯೊಂದಿಗೆ ನಾನು 1 ನೇ ಅರೋಪಿಯ ಕೋಣೆಯಿಂದ ಎರಡು ಬಾರಿ ಹೊರಗೆ ಹೋಗಿದ್ದೆ. ಆದಿನ 1 ನೇ ಅರೋಪಿಯ ಕಚೇರಿಯಲ್ಲಿ ಅನೇಕ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದರು. 1 ನೇ ಅರೋಪಿಯ ಕೋಣೆಯಿಂದ ಸಾರಿಗೆ ವಿಭಾಗದ ಕೋಣೆ ಅದೇ ಕಟ್ಟಡದಲ್ಲಿ ಸುಮಾರು 20 ರಿಂದ 25 ಮೀಟರ್ ಗಳ ಅಂತರದಲ್ಲಿದೆ. ಆ ವಿಭಾಗದಲ್ಲಿ ಯಾವುದೇ ಸಿಬ್ಬಂದಿ ಕೆಲಸ ಮಾಡುತ್ತಿರಲಿಲ್ಲ. ಆ ವಿಭಾಗದಲ್ಲಿ ಸುಮಾರು ಅರ್ಧ ಗಂಟೆಗಳ ಕಾಲ ಇದ್ದೆವು, ಅಲ್ಲಿ ಪ್ರತ್ಯೇಕ ಮಹಜರು ಮಾಡಿಲ್ಲ. ನಡೆಯುತ್ತಿದ್ದ ಮಹಜರಿನ ಒಂದು ಭಾಗವಾಗಿ ಅಲ್ಲಿ ಬರೆದಿತ್ತು. ಆ ವಿಭಾಗದಿಂದ ನೇರವಾಗಿ 1 ನೇ ಆರೋಪಿಯ ಕೋಣೆಗೆ ಹೋಗಿದ್ದೆವು. 2 ನೇ ಅರೋಪಿತನನ್ನು ಮೊದಲ ಬಾರಿಗೆ 1 ನೇ ಅರೋಪಿಯ ಕೋಣೆಯಿಂದ ಹೊರಗೆ ಕರೆದುಕೊಂಡು ಹೋಗಿದ್ದು ನೆಲ ಮಹಡಿಯ ಆತನ ಸ್ಕೂಟರ್ ಬಳಿಗೆ, 2 ನೇ ಬಾರಿ ಹೋಗಿದ್ದು ಸಾರಿಗೆ ವಿಭಾಗದ ಕಡೆಗೆ. ಮೊದಲನೇ ಬಾರಿಯೂ ಸಹ ನೆಲ ಮಹಡಿಯಿಂದ ನೇರವಾಗಿ 1 ನೇ ಅರೋಪಿಯ ಕೋಣೆಗೆ ಹೋಗಿತ್ತು. ಆಗ 2 ನೇ ಅರೋಪಿ 1 ನೇ ಆರೋಪಿಯೊಂದಿಗೆ ಮಾತನಾಡಿ, ನಂತರ ಸಾರಿಗೆ ವಿಭಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗಿದ್ದರು.

14) ನೆಲಮಹಡಿಗೆ ಹೋದಾಗ ಅಲ್ಲಿ ಸುಮಾರು 5 ನಿಮಿಷಗಳ ಅವಧಿ ಇದ್ದೆವು. 2 ನೇ ಅರೋಪಿತನ ಕೈಗಳನ್ನು ಸಾರಿಗೆ ವಿಭಾಗಕ್ಕೆ ಹೋಗಿ ಬಂದ ನಂತರ ತೊಳೆದಿತ್ತು. ಆದಿನ ನಾನು 2 ನೇ ಅರೋಪಿಯನ್ನು ಸಾರಿಗೆ ವಿಭಾಗಕ್ಕೆ ಕರೆದುಕೊಂಡು ಹೋಗಿ ಬಂದದಿಲ್ಲ ಮತ್ತು ಅಲ್ಲಿ 2 ನೇ ಆರೋಪಿಯಿಂದ ಯಾವುದೇ ಹಣವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-2 ರ ಪಂಚನಾಮೆಯಲ್ಲಿ ಹೇಳಿದಂತೆ ಯಾವುದೇ ಪ್ರಕ್ರಿಯೇಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಪಂಚನಾಮೆಯನ್ನು ಅದರಲ್ಲಿ ಹೇಳಿದ ಜಾಗೆಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಅದನ್ನು ಠಾಣೆಯಲ್ಲಿ ಬರೆದಿದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 4 ರಲ್ಲಿ ಹೇಳಿದಂತಹ ಮಾದರಿಗಳನ್ನು ಸಹ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಸಮಯದಲ್ಲಿ ತೆಗೆದಂತಹ ಮಾದರಿ ಸೀಲುನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಪೋಟೋಗಳನ್ನು ಸಹ ನಿಪಿ-2 ಮತ್ತು 4 ರ ಪ್ರಕ್ರಿಯೇಗಳಿಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನನ್ನ ಮುಂದೆ ಸಾಕ್ಷಿದಾರರು ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ದಾಖಲಿಸಿದ ತಪ್ಪು ವರ್ತಮಾನ ಮತ್ತು ಸುಳ್ಳು ಅಂತಿಮ ವರದಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದಂತೆ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಈ ಸಮಯದಲ್ಲಿ ಡಿವಿಆರ್ ನ್ನು ಚಾಸಾ-6 ಇವರ ಸಹಾಯದಿಂದ ನ್ಯಾಯಾಲಯದ ಸಿಪಿಯು ಮೂಲಕ ಪ್ಲೇ ಮಾಡಿ, ನೋಡಿ, **ಮುಂದುವರಿದ 1 ನೇ ಆರೋಪಿ ಪರ ಪಾಟೀಸವಾಲುಃ**

15) ನನಗೆ ಈಗ ತೋರಿಸಿದ ಡಿ.ವಿ.ಆರ್ ನಲ್ಲಿ ಕಂಡು ಬರುವಂತೆ ತಾರೀಕು 16-03-2019 ರ (03-16-2019), 1 ಗಂಟೆ 28 ನಿಮಿಷಕ್ಕೆ ಚಾಸಾ-1 ಮತ್ತು ಇನ್ನೆರಡು ಸಾಕ್ಷಿದಾರರು 1 ನೇ ಆರೋಪಿಯ ಕೋಣೆಯ ಒಳಗೆ ಬರುತ್ತಿದ್ದಾರೆ. ಇಬ್ಬರ ಕೈಯಲ್ಲಿ ಯಾವುದೇ ದಾಖಲಾತಿ ಇಲ್ಲ. ಅದೇ ರೀತಿ, ಅದೇ ದಿನ, 2 ಗಂಟೆ

10 ನಿಮಿಷಕ್ಕೆ ಬಂದಾಗಲೂ ಸಹ ಅವರಿಬ್ಬರ ಬಳಿಯಲ್ಲಿ ಯಾವುದೇ ದಾಖಲಾತಿ ಇಲ್ಲ. ಅದೇ ದಿನ 2 ಗಂಟೆ 18 ನಿಮಿಷಕ್ಕೆ ಚಾಸಾ-1 ಬಂದಾಗ ಕೈಯಲ್ಲಿ ದಾಖಲಾತಿ ಇತ್ತು ಎಂದರೆ ನಿಜ. 2 ಗಂಟೆ 18 ನಿಮಿಷ 45 ಸೆಕೆಂಡ್ ಗಳ ನಂತರ ಬಂದ ಚಾಸಾ-1, 1 ನೇ ಅರೋಪಿಯ ಟೇಬಲ್ ಮೇಲೆ ಏನನ್ನೋ ಇಟ್ಟ ದ್ರಶ್ಯ ಇದೆ ಎಂದರೆ ನಿಜ. ಸದರಿ ಡಿ.ವಿ.ಆರ್ ನಲ್ಲಿ ಚಾಸಾ-1, 1 ನೇ ಅರೋಪಿಯ ಕಚೇರಿಯ ಒಳಗೆ 3 ಬಾರಿ ಬಂದು ಹೋಗಿದ್ದು ಇದೆ ಎಂದರೆ, ನಾನು 3 ಬಾರಿ ಎಂದು ಗಮನಿಸಿಲ್ಲ. ನನಗೆ ಈಗ ತೋರಿಸಿದ ಡಿವಿಅರ್ ನಲ್ಲಿ ಆರೋಪಿಯ ಕೈಗಳನ್ನು ಮೂರು ಬಾರಿ ಅದ್ದಿದೆ ಎಂದರೆ ನಿಜ. ಆ ದ್ರಾವಣದ ಮಾದರಿಗಳು ಎಂಒ-5 ಮತ್ತು 6 ಎಂದರೆ ನಿಜ. ಸದರಿ ದ್ರಾವಣಗಳ ಬಣ್ಣ ಈಗ ಬಿಳಿ ಎಂದರೆ ನಿಜ. ಆದಿನ 1 ನೇ ಅರೋಪಿ ಯಾವುದೇ ಹಣವನ್ನು ಮುಟ್ಟದೇ ಇದ್ದುದರಿಂದ, ದ್ರಾವಣದ ಬಣ್ಣ ಗುಲಾಬಿಯಾಗಿಲ್ಲ ಎಂದರೆ ಸರಿಯಲ್ಲ.

16) ಸದರಿ ಡಿವಿಆರ್ ನ 2 ಗಂಟೆ 42 ನಿಮಿಷ ಅವಧಿಯಲ್ಲಿ, 2 ನೇ ಅರೋಪಿಯ ಕೈತೊಳೆಯದೇ ಆತನನ್ನು ಹೊರಗೆ ಕರೆದುಕೊಂಡು ಹೋಗಿತ್ತು ಎಂದರೆ ನಿಜ. 2 ಗಂಟೆ 43 ನಿಮಿಷ 22 ಸೆಕೆಂಡ್ ನಲ್ಲಿ ಆತನ ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದು, ಕರೆತಂದು, ಕೈ ತೊಳೆದಿದೆ ಎಂದರೆ ನಿಜ. 3 ಗಂಟೆ 30 ನಿಮಿಷ 33 ಸೆಕೆಂಡ್ ಗೆ ನಾನು 2 ನೇ ಆರೋಪಿತನನ್ನು ಗ್ರೌಂಡ್ ಫ್ಲೋರ್ ನ ಪಾರ್ಕಿಂಗ್ ಕರೆದುಕೊಂಡು ಹೋಗಿದ್ದೆ ಎಂದರೆ ನಿಜ. 3 ಗಂಟೆ 38 ನಿಮಿಷ 44 ಸೆಕೆಂಡ್ ಗಳಲ್ಲಿ ಇನ್ಸಪೆಕ್ಟರ್ ಸತೀಶ್ ಅವರ ಎಡ ಕೈಯಲ್ಲಿ ನೀಲಿ ಬಣ್ಣದ ಹ್ಯಾಂಡ್ ಬ್ಯಾಗ್ ಇದೆ ಎಂದರೆ ನಿಜ. 2 ನೇ ಅರೋಪಿಯನ್ನು ಗ್ರೌಂಡ್ ಫ್ಲೋರ್ ಗೆ ಕರೆದುಕೊಂಡು ಹೋಗಿದ್ದ ಬಗ್ಗೆ ನಿಪಿ-4 ರಲ್ಲಿ ಉಲ್ಲೇಖ ಇಲ್ಲ ಎಂದರೆ ನಿಜ.

17) ನಿಪಿ-4 ರಲ್ಲಿ ಲಿಪಿಕರಿಸಿರುವ ವಾಯ್ಸು ರೆಕಾರ್ಡರ್ ನ ಸಂಭಾಷಣೆ ಎಂಒ-19 ರಲ್ಲಿರುವ ಸಂಪೂರ್ಣ ಸಂಭಾಷಣೆ ಅಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಲಿಪಿಕರಿಸಿರುವ ಸಂಭಾಷಣೆ 32 ನಿಮಿಷ 36 ಸೆಕೆಂಡ್ ಗಳಷ್ಟು ಮಾತ್ರ ಇದೆ ಎಂದರೆ ಸರಿಯಲ್ಲ. ಎಂಒ-19 ರ ಸಂಭಾಷಣೆ 38 ನಿಮಿಷಗಳ ಸಂಭಾಷಣೆ ಎಂದರೆ ನಿಜ.

ನಿಪಿ-4 ರಲ್ಲಿ, ಎಂಒ-19 ರಲ್ಲಿರುವ ಒಟ್ಟು 6 ನಿಮಿಷ 24 ಸೆಕೆಂಡ್ ಗಳ ಸಂಭಾಷಣೆಯನ್ನು ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ. ಆ ಸಂಭಾಷಣೆ ದಾಖಲೆಯಲ್ಲಿ ಇದ್ದರೆ ಸತ್ಯ ಹೊರಬರುತ್ತದೆ ಎಂದು ಮತ್ತು ಆರೋಪಿತನನ್ನು ವಿಚಾರಣೆಗೆ ಒಳಪಡಿಸಲು ಆಗುವುದಿಲ್ಲ ಎಂದು ಅದನ್ನು ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿತರ ಮೇಲೆ ಬರೆದ ಒಂದು ತಪ್ಪು ತನಿಖಾ ವರದಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ. ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ**

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ